# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಕೆ.ಕೃಷ್ಣನಾಯ್ಕ, ಪ್ರಥಮ ದರ್ಜೆ ಲೆಕ್ಕ ಸಹಾಯಕ, ಪಂ.ರಾ.ಇಂ. ವಿಭಾಗ, ಚಾಮರಾಜನಗರ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು - ಆದೇಶ.

**ಓದಲಾಗಿದೆ:** ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: Compt/Uplok/MYS/1465/2021/PO ARE-02, ದಿನಾಂಕ:24.12.2021

*****

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ದಿನಾಂಕ 24.12.2021 ರ ಅ.ಸ. ಪತ್ರಕ್ಕೆ ಲಗತ್ತಿಸಿ ಕಳುಹಿಸಲಾದ ಮಾನ್ಯ ಉಪಲೋಕಾಯುಕ್ತ-2 ರವರು ನೀಡಿರುವ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರ ದಿನಾಂಕ:15.12.2021ರ ವರದಿಯಲ್ಲಿ ನೊಂದ ಗುತ್ತಿಗೆದಾರರು, ಚಾಮರಾಜನಗರ ಟೌನ್, ಚಾಮರಾಗನಗರ ಜಿಲ್ಲೆ ಇವರು ಪಂ.ರಾ.ಇಂ. ವಿಭಾಗ, ಚಾಮರಾಜನಗರ ಕಛೇರಿಯಲ್ಲಿನ ಅಧಿಕಾರಿ/ಸಿಬ್ಬಂದಿಗಳು ಕಾಮಗಾರಿಗಳ ಬಿಲ್ಲುಗಳನ್ನು ಮಂಜೂರು ಮಾಡಲು ಲಂಚದ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದಾರೆ ಎಂದು ಇದರಿಂದಾಗಿ ಯಾವುದೇ ಕಾಮಗಾರಿಗಳನ್ನು ನಿರ್ವಹಿಸಲು ತೊಂದರೆಯಾಗುತ್ತಿರುವುದರಿಂದ ಈ ರೀತಿ ಕಾನೂನು ಬಾಹಿರವಾಗಿ ಹಾಗೂ ಅಕ್ರಮವಾಗಿ ಹಣವನ್ನು ವಸೂಲು ಮಾಡುವ ಅಧಿಕಾರಿ/ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸಲ್ಲಿಸಿದ ದೂರಿನನ್ವಯ ಭ್ರಷ್ಟಾಚಾರ ನಿಗ್ರಹ ದಳ, ಚಾಮರಾಜನಗರ ಇವರು ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯದಿಂದ ಶೋಧನ ವಾರೆಂಟನ್ನು ಪಡೆದು ಪಂ.ರಾ.ಇಂ. ವಿಭಾಗ, ಚಾಮರಾಜನಗರ ಕಛೇರಿಗೆ ದಿ:09.04.2018ರಂದು ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ಕಛೇರಿಯ ಸಿಬ್ಬಂದಿಯಾದ ಶ್ರೀ ಕೆ.ಕೃಷ್ಣನಾಯ್ಕ ಬಿನ್ ಲೇಟ್ ಕಾಳಯ್ಯ, ಪ್ರ.ದ.ಲೆ.ಸ. ಇವರ ಬಳಿ ರೂ.21,450/- ಹಣ ದೊರೆತಿದ್ದರಿಂದ ಸದರಿ ಹಣವನ್ನು ಜಪ್ತಿ ಮಾಡಿ ಅವರನ್ನು ದಸ್ತಗಿರಿ ಮಾಡಿ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಯವರು ನೀಡಿರುವ ತನಿಖಾ ವರದಿಗೆ ದೂರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿ ಆರೋಪಿತರು ಸಲ್ಲಿಸಿರುವ ಸಮಜಾಯಿಷಿಯಲ್ಲಿ ತಮಗೆ ಮಾರ್ಚ್ ತಿಂಗಳ ವೇತನವಾಗದೆ ಇರುವ ಕಾರಣ ಮನೆ ಬಾಡಿಗೆ ಹಾಗೂ ಇತರೆ ಖರ್ಚಿಗಾಗಿ ಶ್ರೀ ಕೆ.ಎಂ.ಮಹದೇವಸ್ವಾಮಿ, ಗುತ್ತಿಗೆದಾರರು ಇವರ ಹತ್ತಿರ ರೂ.21,450/-ಗಳನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳಲಾಗಿತ್ತು ಎಂದು ತಿಳಿಸಿದ್ದರೂ ಸಹ ಅದನ್ನು ಪರಿಗಣಿಸದೇ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆಂದು ಹಾಗೂ ಈ ಸಂಬಂಧ ಶ್ರೀ ಕೆ.ಎಂ.ಮಹದೇವಸ್ವಾಮಿ ಇವರು ಮಾನ್ಯ ನ್ಯಾಯಾಧೀಶರ ಮುಂದೆ ದಿ:11.02.2021ರಂದು ಖುದ್ದಾಗಿ ಹಾಜರಾಗಿ ತಾವು ಆಪಾದಿತರಿಗೆ ಸಾಲ ಕೊಟ್ಟಿರುವುದು ಸತ್ಯವಾಗಿರುತ್ತದೆಂದು ಹಾಗೂ ಸದರಿಯವರು ತಮ್ಮಿಂದ ಯಾವುದೇ ಲಂಚವನ್ನು ಕೇಳಿರುವುದಿಲ್ಲವೆಂದು ನ್ಯಾಯಾಧೀಶರ ಮುಂದೆ ಹೇಳಿಕೆ ಸಲ್ಲಿಸಿರುತ್ತಾರೆ. ಅಲ್ಲದೆ, ತಮ್ಮ ಮೇಲೆ ಯಾವ ನಿರ್ದಿಷ್ಟವಾದ ದೂರು ದಾಖಲಾಗಿರುವುದಿಲ್ಲವೆಂದು, ಬದಲಾಗಿ ಅನಾಮಧೇಯ ದೂರನ್ನು ದಾಖಲಿಸಲಾಗಿರುತ್ತದೆ. ಹಾಗಾಗಿ ತಮ್ಮ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆಂದು ತಿಳಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ-2 ರವರು ಭ್ರಷ್ಟಾಚಾರ ನಿಗ್ರಹ ದಳದವರು ಸಲ್ಲಿಸಿರುವ ದಾಖಲಾತಿಗಳು, ತನಿಖಾ ವರದಿ ಮತ್ತು ಆಪಾದಿತರ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಆಪಾದಿತರಾದ ಶ್ರೀ ಕೆ.ಕೃಷ್ಣನಾಯ್ಕ, ಪ್ರ.ದ.ಲೆ.ಸ. ಇವರ ಬಳಿ ದೊರೆತಿರುವ ರೂ.21,450/-ಗಳು ಗುತ್ತಿಗೆದಾರರಾದ ಶ್ರೀ ಕೆ.ಎಂ.ಮಹದೇವಸ್ವಾಮಿ ರವರು ನಿರ್ವಹಿಸಿದ ಕಾಮಗಾರಿಗಳ ಬಿಲ್ಲುಗಳನ್ನು ಪಾಸ್‌ಮಾಡಲು ಪಡೆದ

ಲಂಚದ ಹಣವಾಗಿರುತ್ತದೆಂದು ಅಭಿಪ್ರಾಯಕ್ಕೆ ಬಂದು ಆಪಾದಿತರಾದ ಶ್ರೀ ಕೆ.ಕೃಷ್ಣನಾಯ್ಕ, ಪ್ರ.ದ.ಲೆ.ಸ., ಪಂ.ರಾ.ಇಂ. ವಿಭಾಗ, ಚಾಮರಾಜನಗರ ಇವರು ಸರ್ಕಾರಿ / ಸಾರ್ವಜನಿಕ ನೌಕರರಾಗಿ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಕ.ನಾ.ಸೇ (ವ.ನಿ.ಮೇ) ನಿಯಮಗಳು 1957ರ ನಿಯಮ 14(ಎ)ರಡಿ ತಮಗೆ ವಹಿಸಬೇಕೆಂದು ಉಪಲೋಕಾಯುಕ್ತ-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕೋರಿರುತ್ತಾರೆ.

ಸರ್ಕಾರವು ಪ್ರಕರಣದ ಬಗ್ಗೆ ಮಾನ್ಯ ಉಪಲೋಕಾಯುಕ್ತರು-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರಡಿ ಸಲ್ಲಿಸಿರುವ ವರದಿ ಮತ್ತು ಅದರೊಂದಿಗಿನ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಪ್ರಕರಣದಲ್ಲಿ ನೊಂದ ಗುತ್ತಿಗೆದಾರರ ಸಂಘ, ಚಾಮರಾಜನಗರ ಇವರು ಸಲ್ಲಿಸಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು, ಎ.ಸಿ.ಬಿ.ಯವರು ಪಂ.ರಾ.ಇಂ. ವಿಭಾಗ, ಚಾಮರಾಜನಗರ ಕಛೇರಿಯಲ್ಲಿ ಖುದ್ದಾಗಿ ಶೋಧ ನಡೆಸಿದ ಸಂದರ್ಭದಲ್ಲಿ ಆಪಾದಿತರಾದ ಶ್ರೀ ಕೆ.ಕೃಷ್ಣನಾಯ್ಕ, ಪ್ರ.ದ.ಲೆ.ಸ., ಪಂ.ರಾ.ಇಂ. ವಿಭಾಗ, ಚಾಮರಾಜನಗರ ಇವರ ಬಳಿ ರೂ.21,450/-ಗಳ ಹಣ ದೊರೆತಿರುವುದು ಸ್ಪಷ್ಟವಾಗಿರುತ್ತದೆ. ಸದರಿ ಹಣಕ್ಕೆ ಆಪಾದಿತರು ಸಮರ್ಪಕವಾದ ವಿವರ / ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಅಲ್ಲದೆ, ಅವರ ಬಳಿ ದೊರೆತ ಹಣವು ಗುತ್ತಿಗೆದಾರರಾದ ಶ್ರೀ ಕೆ.ಎಂ.ಮಹದೇವಸ್ವಾಮಿ ಇವರು ನಿರ್ವಹಿಸಿದ ಕಾಮಗಾರಿಗಳ ಬಿಲ್ಲುಗಳನ್ನು ಸಂದಾಯ ಮಾಡಲು ಪಡೆದಿರುವ ಹಣವೆಂಬುದು ಪ್ರಾಥಮಿಕ ತನಿಖೆಯಿಂದ ರುಜುವಾತಾಗಿರುವ ಕಾರಣ ಸದರಿ ಆರೋಪಿತರ ವಿರುದ್ಧ ಅಕ್ರಮ ಸಂಭಾವನೆ ಸ್ವೀಕಾರದಂತಹ ಗಂಭೀರ ಆರೋಪವಿರುವುದರಿಂದ ಸದರಿ ಆರೋಪದ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕೈಗೊಳ್ಳುವುದು ಅವಶ್ಯವಿರುತ್ತದೆ.

ಆದ್ದರಿಂದ ಶ್ರೀ ಕೆ.ಕೃಷ್ಣನಾಯ್ಕ, ಪ್ರಥಮ ದರ್ಜೆ ಲೆಕ್ಕ ಸಹಾಯಕ, ಪಂ.ರಾ.ಇಂ. ವಿಭಾಗ, ಚಾಮರಾಜನಗರ ಇವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ವಿಚಾರಣೆ ನಡೆಸಲು ಸದರಿ ನಿಯಮಗಳ ನಿಯಮ 14ಎ ರನ್ವಯ ಪ್ರದತ್ತವಾದ ಅಧಿಕಾರದಡಿ ಮಾನ್ಯ ಉಪಲೋಕಾಯುಕ್ತ-2ರವರಿಗೆ ವಹಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 17 ಇಎನ್‌ಕ್ಯೂ 2022</u>**

**<u>ಬೆಂಗಳೂರು, ದಿನಾಂಕ:24.03.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಕೆ.ಕೃಷ್ಣನಾಯ್ಕ, ಪ್ರಥಮ ದರ್ಜೆ ಲೆಕ್ಕ ಸಹಾಯಕ, ಪಂ.ರಾ.ಇಂ. ವಿಭಾಗ, ಚಾಮರಾಜನಗರ ಇವರ ವಿರುದ್ಧದ ಆರೋಪದ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸಲು ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರನ್ವಯ ಪ್ರದತ್ತವಾದ ಅಧಿಕಾರದಡಿ ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನದೀಮ್ 25/3

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

24/03/2022

**<u>ಇವರಿಗೆ:</u>**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್).

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು (ಮೂಲ ದಾಖಲಾತಿಗಳೊಂದಿಗೆ)
3. ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ), ಕೆ.ಆರ್.ವೃತ್ತ, ಬೆಂಗಳೂರು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ.
8. ಸರ್ಕಾರದ ಅಧೀನ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ), ವಿಕಾಸಸೌಧ,
9. ಸಂಬಂಧಪಟ್ಟ ನೌಕರರಿಗೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಇವರ ಮುಖಾಂತರ

**ಪ್ರತಿ ಮಾಹಿತಿಗಾಗಿ:-**

1. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
2. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
3. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು